ಶ್ರೀ ಎಲ್.ಎ.ರವಿಸುಬ್ರಹ್ಮಣ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸರ್ಕಾರಕ್ಕೆ ಸರಿಯಾದಂಥ ಮಾಹಿತಿಯನ್ನು ಕೊಟ್ಟಿಲ್ಲ. ಆದ್ದರಿಂದ ಮುಂದೆ ಆಧಾರ ಸಮೇತ ಇನ್ನೊಂದು ಬಾರಿ ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ನಮ್ಮ ಸಂಪರ್ಕಕ್ಕೆ ಬರುವುದಿಲ್ಲ. ಅವರು ಏನು ಮಾಹಿತಿಯನ್ನು ಕೊಟ್ಟಿದ್ದಾರೋ, ಆ ಮಾಹಿತಿಯನ್ನು ಕೊಟ್ಟಿದ್ದೇನೆ, ಅಷ್ಟೇ.

ರಸ್ತೆಗೆ ಅಡ್ಡಲಾಗಿರುವ ಕಾಂಪೌಂಡ್ ತೆರವುಗೊಳಿಸುವುದು

66 : (446)

ಶ್ರೀ ಸುರೇಶ್‌ಗೌಡ (ನಾಗಮಂಗಲ)

ಅ) ಬಿ.ಬಿ ಎಂ. ಪಿ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯ, ಜ್ಞಾನಭಾರತಿನಗರ, 1ನೇ ಕ್ರಾಸ್‌ನಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್ ಹಾಗೂ –ತಾತ್ಕಾಲಿಕ ಶೆಡ್‌ನ್ನು ತೆರವುಗೊಳಿಸುವ ಬಗ್ಗೆ ಸದನದಲ್ಲಿ ಐದು ಬಾರಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರೂ ಸಹ ಈವರೆವಿಗೂ ಕಾರ್ಯಗತಗೊಳಿಸದೇ ಇರಲು ಕಾರಣವೇನು;

ಆ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಇಲ್ಲಿಯವರೆಗೆ ಸದರಿ ಕಾಂಪೌಂಡ್ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಈ) ಕಾಂಪೌಂಡ್ ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಬೇಕಾದ ಕಾಲಾವಕಾಶವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಜ್ಞಾನಜ್ಯೋತಿನಗರ 1ನೇ ಕ್ರಾಸ್‌ನಲ್ಲಿ ಸ್ವತ್ತಿನ ಸಂಖ್ಯೆ. 47ರಲ್ಲಿ 286.25 ಚದರ ಅಡಿ ಜಾಗ ಖಾಸಗಿ ಸ್ವತ್ತಾಗಿರುತ್ತದೆ. ಇದನ್ನು

ಭೂಸ್ವಾಧೀನಪಡಿಸಿಕೊಂಡು ಪರಿಹಾರ ಮೊತ್ತ ರೂ.3,72,602/- ಗಳನ್ನು ನೀಡಲು ಪಾಲಿಕೆಯ ಸಭೆಯು ದಿನಾಂಕ:24/02/2011ರಂದು ಅನುಮೋದನೆ-ಯನ್ನು ನೀಡಿರುತ್ತದೆ. ಭೂ-ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಕಾಂಪೌಂಡ್ ಹಾಗೂ ತಾತ್ಕಾಲಿಕ ಶೆಡ್‌ನ್ನು ತೆರವುಗೊಳಿಲು ಕ್ರಮ ಕೈಗೊಳ್ಳಲಾವುದು.

ಆ) ಬಂದಿರುತ್ತದೆ.

ಇ) ಭೂಸ್ವಾಧೀನ ಕಾಯ್ದೆಯ ಕಲಂ 6(1)ರನ್ನಯ ದಿನಾಂಕ: 26-07-2012ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಕಾಂಪೌಂಡ್ ಹಾಗೂ ಶೆಡ್‌ನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಮಧ್ಯೆ, ಸ್ವತ್ತಿನ ಭೂಸ್ವಾಧೀನದ ಸಂಬಂಧ ಶ್ರೀ. ನಟರಾಜ್ ಎಂಬುವವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 41461/2012ಅನ್ನು ದಾಖಲಿಸಿದ್ದು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:11-10-2012ರಂದು ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದೆ.

ಈ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣವೇ ಭೂಮಾಲೀಕರಿಗೆ ಪರಿಹಾರ ಧನವನ್ನು ಪಾವತಿಸಿ, ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಂಡು, ಕಾಂಪೌಂಡನ್ನು ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು.

ಶ್ರೀ ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ನಾನು ಶಾಸಕನಾಗಿ ನಾಲ್ಕೂವರೆ ವರ್ಷಗಳು ಕಳೆಯುತ್ತಾ ಬಂತು. ಇದೇ ಪ್ರಶ್ನೆಯನ್ನು ಮೊದಲನೇ ಬಾರಿಗೆ 2009ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಆಗ ತಮ್ಮ ಸ್ಥಾನದಲ್ಲಿ ಕುಳಿತ್ತಿದ್ದರು. ಮುಂದಿನ ಅಧಿವೇಶನದಲ್ಲಿ ಈ ಕೆಲಸವನ್ನು ಸಂಪೂರ್ಣವಾಗಿ ಮಾಡುತ್ತೇವೆಂದು ಹೇಳಿದ್ದರು. ಆಗ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಮತ್ತೆ ಎರಡನೆಯ ಬಾರಿ 2010ರಲ್ಲಿ ಇದೇ ಪ್ರಶ್ನೆಯನ್ನು ಅಧಿವೇಶನದಲ್ಲಿ ತಂದಾಗ, ಆಗ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರು ಈ ಪ್ರಶ್ನೆ ಮುಂದಿನ ಅಧಿವೇಶನಕ್ಕೆ ಬರದ ಹಾಗೆ ನೋಡಿಕೊಳ್ಳುತ್ತೇನೆಂಬ ಮಾತನ್ನು

ಹೇಳಿದ್ದರು. ಇವರು ಆದ ನಂತರ ಮಾನ್ಯ ಸದಾನಂದ ಗೌಡರು ಮುಖ್ಯಮಂತ್ರಿಗಳಾಗಿ ಬಂದರು. ನಾನು ಅವರ ಮುಂದೆ ಕೇಳಿದೆ. ಈ ಕೆಲಸ ಆಗುತ್ತದೆಯೋ, ಇಲ್ಲವೋ, ಎಂಬ ಪ್ರಶ್ನೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಕೇಳಿದೆ. ಆಗ ಅವರು ಖಂಡಿತವಾಗಿಯೂ ನನ್ನ term ಮುಗಿಯುವುದರೊಳಗೆ ಮುಗಿಯುತ್ತದೆಂಬ ಉತ್ತರವನ್ನು ಕೊಟ್ಟಿದ್ದರು. ಅದು ಆಗಲಿಲ್ಲ, ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿ-ಗಳಾಗಿ ಉತ್ತರವನ್ನು ಕೊಡುತ್ತಿದ್ದಾರೆ. ನನಗೆ ಕೊಟ್ಟಿರುವಂಥ ಉತ್ತರದಲ್ಲಿ ಭೂಸ್ವಾಧೀನ ಮಾಡುವುದಕ್ಕೆ ನಾಲ್ಕೂವರೆ ವರ್ಷಗಳು ಬೇಕು. Public interestನಲ್ಲಿ ರಸ್ತೆಯಾದರೆ, ಸಾವಿರಾರು ಜನರಿಗೆ ಅನುಕೂಲವಾ-ಗುತ್ತದೆಂದು ಹೇಳಿ ನಾಲ್ಕೂವರೆ ವರ್ಷಗಳು ಆಗಿದೆ. ಇನ್ನು 6 ತಿಂಗಳು ಮುಗಿದರೆ ನಮ್ಮ ಶಾಸಕರ ಅವಧಿ ಮುಗಿಯುತ್ತದೆ. ಇನ್ನೂ ಇದಕ್ಕೆ ಎಷ್ಟು ವರ್ಷಗಳು ಬೇಕು? ಈ ಕೆಲಸವನ್ನು ಮಾಡುತ್ತಾರೋ, ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿ ಬಿಟ್ಟರೆ, ನಾನು ಇದರಿಂದ ಬಹಳ ತೃಪ್ತನಾ-ಗುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್-ಗೌಡರು ಒಂದು ತಾತ್ಕಾಲಿಕ ಶೆಡ್ ಇದೆ, ಈ ಶೆಡ್ ಅನ್ನು ರಸ್ತೆಯ ಸಲುವಾಗಿ acquire ಮಾಡಬೇಕೆಂಬ proposal ಅನ್ನು ಇಟ್ಟಿದ್ದಾರೆ. ಅದರ ಸಲುವಾಗಿ ಬಿ.ಬಿ.ಎ.ಪಿ.ಯವರು ಸಹಿತ ಈ ಭೂಮಿಯನ್ನು acquire ಮಾಡುವ process ಅನ್ನು start ಮಾಡಿದರು. ಆ ಭೂಮಿ ಖಾಸಗಿಯವರದಾಗಿದ್ದು, ಇದು ರಸ್ತೆಗೆ ಅಡ್ಡ ಬರುತ್ತದೆ, ಇದನ್ನು ರಸ್ತೆಗೆ ಉಪಯೋಗ ಮಾಡುವುದಕ್ಕೆ ಭೂಮಿಯನ್ನು ಸ್ವಾಧೀನ ಮಾಡಬೇಕೆಂಬ ಅಹವಾಲು ಇದೆ. ಅದಕ್ಕೆ ಬಿ.ಬಿ.ಎಂ.ಪಿ.ಂಯವರಿಗೂ activities ಮಾಡಿದ್ದೇವೆ. ಹಿಂದಿನ ಮುಖ್ಯಮಂತ್ರಿಯವರು ಆ ಸಂದರ್ಭದಲ್ಲಿ ಭೂಸ್ವಾಧೀನ ಮಾಡುತ್ತೇವೆ, ಇದನ್ನು acquire ಮಾಡಿಕೊಂಡು ರಸ್ತೆಗೆ ಜಾಗ ಬಿಡಿಸುತ್ತೇವೆಂದು ಭರವಸೆಯನ್ನು ಕೊಟ್ಟಿರಬಹುದು.

ಆದರೆ, ಈಗ ಏನಾಗಿದೆ ಎಂದರೆ 2011ರಲ್ಲಿ ರಿಟ್ ಪಿಟಿಷನ್ ಸಂಖ್ಯೆ 41461/2011ನಲ್ಲಿ ಒಂದು ಪಿಟಿಷನ್ ಫೈಲ್ ಆಗಿದೆ. ಆ ಜಮೀನಿನ

ಮಾಲೀಕರಾದ ನಟರಾಜ್ ಎನ್ನುವವರು ಈ ರಿಟ್ ಪಿಟಿಷನ್ ಫೈಲ್ ಮಾಡಿದ್ದಾರೆ. ಈ ಒಂದು ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವುದೇ ಮುಂದಿನ ಕ್ರಮ ಕೈಗೊಳ್ಳಬಾರದು ಎಂದು ದಿನಾಂಕ 11-10-2012ರಲ್ಲಿ ಕೋರ್ಟ್‌ನಿಂದ interim order ಅಂದರೆ stay order ಆಗಿದೆ. ಹಾಗಾಗಿ ನಮ್ಮ ಸರ್ಕಾರದ ವಕೀಲರು ಅಪೀಲ್ ಹಾಕಿದ್ದಾರೆ. ಆ ಒಂದು ಸ್ಟೇ ವೆಕೇಟ್ ಮಾಡಿಸುವಂಥ ಪ್ರಯತ್ನವೂ ನಡೆದಿದೆ. ಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಇರುವುದರಿಂದ ತಕ್ಷಣದಲ್ಲಿ ನಾವು ಏನೂ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಸ್ಟೇ ವೆಕೇಟ್ ಆದಮೇಲೆ ನಾವು ಮುಂದಿನ ಕ್ರಮ ಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಸುರೇಶ್‌ಗೌಡ : ರಸ್ತೆಗೋಸ್ಕರ ಅಲ್ಲ ಜಾಗವನ್ನು ಕೇಳುತ್ತಿರುವುದು, ಯಾವುದೇ ಮನೆ ಕಟ್ಟಲಿಕ್ಕೆ ಅಲ್ಲ. ಅಲ್ಲಿ 30 x 40 ಅಡಿ ಜಾಗ ಕ್ಲಿಯರ್ ಆದರೆ 3 ಕಿ.ಮೀ. ರಸ್ತೆಯಾಗುತ್ತದೆ. ಸಾರ್ವಜನಿಕ ಉಪಯೋಗಕ್ಕೆ ಎಂದಿದ್ದರೆ, ಅಂಥದಕ್ಕೆ ಯಾವುದೇ ಸ್ಟೇ ಕೊಡಬಾರದು ಎಂದು ಸುಪ್ರೀಂಕೋರ್ಟ್‌ನ ಆದೇಶವೇ ಇದೆ. ಆದರೆ ಇವತ್ತು ಅಲ್ಲಿ ಅಧಿಕಾರಿಗಳು ಯಾರೋ ಒಬ್ಬರಿಗೆ ಸಹಾಯ ಮಾಡಬೇಕೆಂದು, ಇಲ್ಲದ ಸುಳ್ಳು ನೆಪಗಳನ್ನು, ಕುಂಟು ನೆಪಗಳನ್ನು ಹೇಳಿಕೊಂಡು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವುದು ಎಷ್ಟು ಸರಿ? ಅದಕ್ಕೆ ಸ್ಟೇ ಇದೆ ಎಂದು ಏನು ಬರೆದು ಕೊಟ್ಟಿದ್ದಾರೆ, ಅದನ್ನು ಮುಖ್ಯಮಂತ್ರಿಗಳು ಇಲ್ಲಿ ಹೇಳಿದ್ದಾರೆ. ಆದರೆ ವಾಸ್ತವಾಂಶ ಏನೆಂದರೆ, ಬಿ.ಬಿ.ಎಂ.ಪಿ. ಅಧಿಕಾರಿಗಳಿಗೆ ಈ ರಸ್ತೆ ಮಾಡಲು ಇಷ್ಟವಿಲ್ಲ. ಏಕೆಂದರೆ, ಅಲ್ಲಿ ಕಾಣದ ಕೈಗಳು ತಮ್ಮ ಕೈಚಳಕವನ್ನು ತೋರಿಸುತ್ತಿವೆ. ಈ ವಿಷಯದ ಬಗ್ಗೆ ಪುನ: ನಾನು ಪ್ರಶ್ನೆ ಕೇಳಲು ಇಲ್ಲಿ ಅವಕಾಶವಿದೆಯೋ, ಇಲ್ಲವೋ ಗೊತ್ತಿಲ್ಲ. ಆದ್ದರಿಂದ ತಕ್ಷಣ ಈ ಕೆಲಸ ಮಾಡಬೇಕೆಂದು ತಾವು ಒಂದು ಸ್ಪಷ್ಟವಾದಂಥ ನಿರ್ದೇಶನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಸದಸ್ಯರಿಗೆ ಭರವಸೆ ಕೊಡುತ್ತೇನೆ, ಇನ್ನೊಂದು ಸಲ ಪ್ರಶ್ನೆ ಕೇಳುವ ಅವಕಾಶ ಇದ್ದೇ ಇರುತ್ತದೆ, ಅದರಲ್ಲೇನೂ ಸಮಸ್ಯೆಯಿಲ್ಲ. ನಾನು ಈಗಾಗಲೇ ಹೇಳಿದೆ, ಕೋರ್ಟಿನಲ್ಲಿ ತಡೆಯಾಜ್ಞೆ ಇರುವುದರಿಂದ ತಕ್ಷಣದಲ್ಲಿ ನಾವು ಏನೂ ಮಾಡುವಂಥ

ಪರಿಸ್ಥಿತಿ ಇಲ್ಲ. ಅದನ್ನು ವೆಕೇಟ್ ಮಾಡಿಸಲು ಪ್ರಯತ್ನ ಮಾಡುತ್ತೇವೆ. ಆದಷ್ಟು ಬೇಗನೆ ಆ ಕೆಲಸವನ್ನು ಮಾಡುತ್ತೇವೆಂದು ಹೇಳುತ್ತೇನೆ.

ಬಡಾವಣೆಗಳಿಗೆ ಮೂಲಸೌಲಭ್ಯ

67 : (584)

ಶ್ರೀ ಹ್ಯಾರೀಸ್ ಎನ್. ಎ. (ಶಾಂತಿನಗರ)

ಅ. ಈ ಹಿಂದೆ ಬಡಾವಣೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಹಂಚಿಕೆ ಮಾಡಿರುವ ಎಷ್ಟು ಬಡಾವಣೆಗಳಿಗೆ ಇನ್ನೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಡಾವಣೆಗಳನ್ನು ಪರಿಪೂರ್ಣವಾಗಿ ರಚನೆ ಮಾಡಿದ ನಂತರವೇ ಅರ್ಹಫಲಾನುಭವಿಗಳಿಗೆ ಹಂಚಿಕೆ ಮಾಡುವ ಸಂಪ್ರದಾಯವನ್ನು ಸರ್ಕಾರ ಜಾರಿಗೊಳಿಸಲಾಗುವುದೇ;

ಇ. ಸಾರ್ವಜನಿಕರ ಬೇಡಿಕೆಗನುಗುಣವಾಗಿ ನಿವೇಶನಗಳನ್ನು ಒದಗಿಸಿಕೊಡಲು ಸರ್ಕಾರದ ಕಾರ್ಯಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು)

ಬೆಂಗಳೂರು ನಗರದ 1). ಬನಶಂಕರಿ 6ನೇ ಹಂತದ ಬಡಾವಣೆ, 2). ಮುಂದುವರೆದ ಬನಶಂಕರಿ 6ನೇ ಹಂತದ ಬಡಾವಣೆ. 3). ಅಂಜನಾಪುರ ಬಡಾವಣೆ, 4). ಮುಂದುವರೆದ ಅಂಜನಾಪುರ ಬಡಾವಣೆ, 5). ಜೆ.ಪಿ.ನಗರ 8ನೇ ಹಂತ ಬಡಾವಣೆ 6). ಜೆ.ಪಿ.ನಗರ 9ನೇ ಹಂತ ಬಡಾವಣೆ 7). ಸರ್. ಎಂ.ವಿ ಬಡಾವಣೆ 8). ಮುಂದುವರೆದ ಸರ್.ಎಂ.ವಿ ಬಡಾವಣೆ, 9). ಅರ್ಕಾವತಿ ಬಡಾವಣೆ 10). ನಾಗರಭಾವಿ ಬಡಾವಣೆ, 11) ಚಂದ್ರ ಬಡಾವಣೆ 12). ಜ್ಞಾನಭಾರತಿ ಬಡಾವಣೆಗಳಲ್ಲಿ ಭಾಗಶ: ಮೂಲಭೂತ ಸೌಕರ್ಯಗಳನ್ನು ಪ್ರಾಧಿಕಾರದಿಂದ ಒದಗಿಸಿದ್ದು, ಮೇಲಿನ ಎಲ್ಲಾ ಬಡಾವಣೆಗಳಿಗೆ ಸಂಪೂರ್ಣ ಮೂಲಭೂತ ಸೌಕರ್ಯಗಳನ್ನು 2014 ನೇ ಸಾಲಿನೊಳಗೆ ಕಲ್ಪಿಸಲು ಪ್ರಾಧಿಕಾರದಿಂದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.